# 2

# ಕ್ರಿಸ್ತನ ಕಾರ್ಯಗಳನ್ನು ಮುಂದುವರೆಸುವದು

## (ಯೋಹಾನ 14)

*"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ. ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು. ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು" (ವಚನಗಳು 12-14).*

ಶೂಲುಜಿತನಾಗುವ ಹಿಂದಿನ ರಾತ್ರಿಯಲ್ಲಿ, ಮೇಲುಪ್ಪರಿಗೆಯಲ್ಲಿ ಯೇಸು ತನ್ನ ಅಪೊಸ್ತಲರಿಗೆ ಪ್ರೋತ್ಸಾಹ ನೀಡಿ, ಅವರು ಆತನ ಕಾರ್ಯಗಳನ್ನು ಮುಂದುವರೆಸಬೇಕೆಂದು ಹೇಳಿದನು. ನಂಬಿಗಸ್ತರಾದ ಮನುಷ್ಯರು ಮಾಡುವಂತೆ ಯೇಸು ತನ್ನ ಕೆಲಸವನ್ನು ಅಂತಿಮಗೊಳಿಸುತ್ತಿದ್ದನು; ಆತನು ತನ್ನ ಕೆಲಸಗಳನ್ನು ಅಪೊಸ್ತಲರು ಮುಂದುವರೆಸುವಂತೆ ಕ್ರಮಪಡಿಸಿದ್ದನು. ಮೂರು ವರ್ಷಗಳ ಕಾಲ ಆತನು ಕಾರ್ಯ ನಿರ್ವಹಿಸಿ, ಆ ಸೇವೆಯನ್ನು ಅಪೊಸ್ತಲರು ಮುಂದುವರೆಸಬೇಕೆಂದು ಯೋಜಿಸಿದ್ದನು. "ಕ್ರೈಸ್ತತ್ವ" ಎಂಬ ಕ್ರಾಂತಿಯ ಕೆಲಸವನ್ನು ಆತನು ಆರಂಭಿಸಿದ್ದನು ಆತನು ಪುನಃ ಬರುವವರೆಗೆ ಆ ಕ್ರಾಂತಿಯ ಲೋಕದಲ್ಲಿ ಸಾಗಬೇಕಿತ್ತು, ಅದರಿಂದ ಲೋಕಕ್ಕೆ ಸ್ವಸ್ಥತೆಯ ಕಿರಣಗಳು ಉಂಟಾಗಿದ್ದವು.

ಆತನಿಗಾಗಿ, ಅಪೊಸ್ತಲರು ಮಾಡಬೇಕಾದ ಕೆಲಸವೇನು?

### ಅದು ಕ್ರಿಸ್ತನ ಸ್ವಭಾವ ಚಿತ್ತವಾದ ಕೆಲಸವಾಗಿತ್ತು

*ಯೇಸು ನಡೆಸಿದ್ದ ಕೆಲಸಗಳನ್ನೇ ಅಪೊಸ್ತಲರು ನೆರವೇರಿಸಬೇಕಿತ್ತು,* "ನನ್ನನ್ನು ನಂಬುವವನು ನಾನು ನಡೆಸುವ ಕ್ರಿಯೆಗಳನ್ನು ತಾನೂ ನಡಿಸುವನು" (14:12ಎ). ಕ್ರಿಸ್ತನ ಕೆಲಸಗಳನ್ನು ಗಣನೆಗೆ ತರುವದಾದರೆ, ಅದರಲ್ಲಿ ನಿರ್ಮಲತ್ವ, ಪ್ರಭಾವ ಹಾಗೂ ನಿತ್ಯವಾದ ಪರಿಣಾಮಗಳನ್ನು ನೋಡುತ್ತೇವೆ. ವಾಕ್ಯದಲ್ಲಿ ಗಮನಿಸಿದರೆ, ಆತನು ಕುರುಡರ ಕಣ್ಣುಗಳನ್ನು ತೆರೆದನು, ಕುಷ್ಟರೋಗಿಯನ್ನು ವಾಸಿಮಾಡಿದನು, ಸತ್ತವರನ್ನು ಎಬ್ಬಿಸಿದನು ಹಾಗೂ ಪರಿಪೂರ್ಣವಾದ ಪ್ರಸಂಗವನ್ನು ಮಾಡಿದನು. ಹಾಗಾದರೆ ಆತನ ಅನುಯಾಯಿಗಳು, ಆತನ ಕೆಲಸವನ್ನು ಮಾಡಬೇಕು ಎಂಬುದರ ಅರ್ಥವೇನು?

ಆತನು ಅವರನ್ನು ಎರಡು ವಿಧವಾಗಿ ಪ್ರೋತ್ಸಾಹಿಸಿದನು, ಆತನ ನಂತರದಲ್ಲಿ ಅಪೊಸ್ತಲರು ಏನು ಮಾಡಬೇಕು - ಅಂದರೆ ಪವಿತ್ರಾತ್ಮನ ಸಹಾಯದಿಂದ ಅದ್ಭುತಗಳನ್ನು ಮಾಡಿ ಪ್ರಸಂಗಗಳನ್ನು ಮಾಡಬೇಕಿತ್ತು. ನಂತರದಲ್ಲಿ ಕ್ರೈಸ್ತರೆಲ್ಲರು ಮಾಡಬೇಕಾದ ಒಳ್ಳೆಯ ಕಾರ್ಯಗಳ ಕುರಿತು, ಅವರು ಸಹ ಆತನ ಸ್ವಭಾವಕ್ಕನುಗುಣವಾದ ಕೆಲಸಗಳನ್ನು ಮುಂದುವರೆಸಬೇಕಿತ್ತು. ಕ್ರಿಸ್ತನು ನೀಡಿದ ನಿತ್ಯಜೀವದ ಕಾರ್ಯವು ತಂದೆಯ ಚಿತ್ತದಂತಿತ್ತು. ಆತನ ಅನುಯಾಯಿಗಳು ಅದನ್ನು ಅಂತ್ಯದವರೆಗೆ ಮಾಡಬೇಕಿತ್ತು. ಕ್ರಿಸ್ತನ ಕಾರ್ಯಗಳು ನಿತ್ಯವಾದ ವ್ಯವದಾನವನ್ನು ಹೊಂದಿದ್ದು, ಅದರ ಉದ್ದೇಶದಲ್ಲಿ ಆತ್ಮೀಕತೆಯು ಒಳಗೊಂಡಿತ್ತು, ಸೈತಾನನ ಕಾರ್ಯಗಳನ್ನು ಲಯಮಾಡುವ ಬಲವನ್ನು ಹೊಂದಿತ್ತು.

## ಆತನ ಕೆಲಸದಂತೆ ಗುಣಮಟ್ಟವನ್ನು ಹೊಂದಿತ್ತು

*ಯೇಸುವಿನ ಕೆಲಸಕ್ಕಿಂತಲೂ, ಅಪೊಸ್ತಲರ ಕಾರ್ಯಗಳು ಅಧಿಕಗುಣಮಟ್ಟದ್ದಾಗಿತ್ತು.* "ಅವುಗಳಿಗಿಂತ ಮಹತ್ವದ ಕ್ರಿಯೆಗಳನ್ನು ನಡಿಸುವನು ಯಾಕಂದರೆ ನಾನು ತಂದೆಯ ಬಳಿಗೆ ಹೋಗುವೆನು" (14:12ಬಿ). ಅಪೊಸ್ತಲರಾಗಲಿ, ಅವರ ಮುಂದಿನ ಅನುಯಾಯಿಗಳಾಗಲಿ, ಯೇಸುವಿಗಿಂತಲೂ ಮಹತ್ವದ ಕಾರ್ಯವನ್ನು ಹೇಗೆ ನಿರ್ವಹಣೆ ಮಾಡಬಹುದಿತ್ತು?

ಕ್ರಿಸ್ತನು ನೀಡಿದ ರಕ್ಷಣೆಯನ್ನು ಇತರರಿಗೆ ವರ್ಗಾಯಿಸುವ ಮೂಲಕ ಅವರು ಮಹತ್ವದ ಕಾರ್ಯವನ್ನು ಮಾಡುವ ಸಾಧ್ಯತೆಯಿತ್ತು. ನಂತರದ ನಿರ್ವಹಣೆಯ ಮೂಲಕ, ಯೇಸು ನಿರ್ಮಾಣ ಮಾಡಿದ ರಕ್ಷಣೆಯನ್ನು ಜನರಿಗೆ ಮನವರಿಕೆ ಮಾಡುವ ಸಾಧ್ಯತೆಯಿತ್ತು. ಪಾಪ ಪರಿಹಾರವಾಗಿ ಆತ್ಮಗಳಿಗೆ ಬಿಡುಗಡೆಯಾಗಿ, ಜನರು ದೇವರ ಅನ್ಯೋನ್ಯತೆಗೆ ಬರುವ ಸಾಧ್ಯತೆಯಿತ್ತು. ಆದಿಯ ಕಾರ್ಯಕ್ಕಿಂತಲೂ, ಈ ಕಾರ್ಯವು ಮಹತ್ತವಾದ ಪರಿಣಾಮವನ್ನು ಹೊಂದಿತ್ತು. ಪರಿಣಾಮವು ಮೂಲ ಕಾರ್ಯಕ್ಕಿಂತಲೂ, ಅತಿ ಹೆಚ್ಚಾಗಿತ್ತು. ಗರ್ಭದಲ್ಲಿ ಅಡಗಿರುವ ಮಗುವೋ ಅಥವಾ ಗರ್ಭದಿಂದ ಹೊರ ಬಂದು, ಲೋಕದಲ್ಲಿ ಸುಂದರವಾಗಿ ಬೆಳೆಯುತ್ತಿರುವ ಮಾನವನೋ, ಈ ಇಬ್ಬರಲ್ಲಿ ಯಾರು ಮಹತ್ತಾದವರು? ಗಿಡವನ್ನು ನೆಡಲು ಸಿದ್ಧಮಾಡಿದ ನೆಲವೋ ಅಥವ ಮನುಷ್ಯರನ್ನು ಚೈತನ್ಯಗೊಳಿಸುವ ಆಹಾರವನ್ನು ನೀಡುವ ಗೋದಿಯೋ, ಈ ಎರಡರಲ್ಲಿ ಯಾವದು ಶ್ರೇಷ್ಠ?

ಯೇಸು ನಿರ್ಮಾಣ ಮಾಡಿದ ರಕ್ಷಣಾ ಕಾರ್ಯವನ್ನು ಪಂಚಾಶತ್ತಮ ದಿನದಂದು ಪೂರ್ಣವಾಗಿ ಪ್ರಸಂಗಿಸಲಾಯಿತು. ಮೂರು ಸಾವಿರ ಜನರು ರಕ್ಷಣೆಗೆ ವಿಧೇಯರಾಗಿ, ನಿತ್ಯ ಜೀವದ ಭರವಸವನ್ನು ಹೊಂದಿದರು. ಈ ರಕ್ಷಣಾ ಕಾರ್ಯವು ಮಹತ್ವದ್ದಾಗಿತ್ತು - ಯೇಸುವಿನ ರಕ್ಷಣಾ ಯೋಜನೆಯ ಪ್ರಸಂಗವು ಯೆರೂಸಲೇಮಿನಲ್ಲಿ ಪ್ರಸಿದ್ಧವಾಯಿತು.

## ಆತನ ಕೆಲಸದಲ್ಲಿರುವ ಅಧಿಕಾರ

*ಯೇಸುವಿನ ಕೆಲಸವನ್ನು ಅಪೊಸ್ತಲರು ಅಧಿಕಾರಯುತವಾಗಿ ಮಾಡಬೇಕಿತ್ತು.* ಆತನು ತಂದೆಯ ಬಳಿಗೆ ಹೋಗಬೇಕಿದದ್ದರಿಂದ, ಅವರು ಈ ಕೆಲಸವನ್ನು ಮಾಡಬೇಕಾಯಿತು (14:12ಸಿ). ಆತನು ದೇವರ ಉದ್ದೇಶವನ್ನು ಅವರಿಗೆ ಮನವರಿಕೆ ಮಾಡಿದ್ದನು. ಅಪೊಸ್ತಲರು ಹಾಗೂ ಅವರ ಮುಂದಿನ ಪೀಳಿಗೆಯವರು ಆತನ ಸೇವೆಯನ್ನು ಮುಂದುವರೆಸಬೇಕಿತ್ತು. ಆತನು ತನ್ನ ಸೇವೆಯನ್ನು ಊರ್ಜಿತಗೊಳಿಸಿ, ಅದನ್ನು ಸಾಧ್ಯಮಾಡಿದ್ದನು, ಆದರೆ ಅದನ್ನು ನೆರವೇರಿಸುವಂಥ ಕಾರ್ಯವನ್ನು ಶಿಷ್ಯರಿಗೆ ನೀಡಿದನು. ಆತನು ಅವರಿಗೆ ನೀಡಿದ ಅಧಿಕಾರದ ಮೂಲಕ ಶಿಷ್ಯರು ಸುವಾರ್ತೆಯನ್ನು ಇತರರಿಗೆ ಮನವರಿಕೆ ಮಾಡಬೇಕಿತ್ತು. ಈ ಕಾರ್ಯದ ಮೂಲಕ ಅವರು ಕ್ರಿಸ್ತನ ಪ್ರತಿನಿಧಿಗಳಾದರು.

## ಆತನ ಕೆಲಸವನ್ನು ಬಲದಿಂದ ಮಾಡಿದರು

*ಬಲ ಎಂಬುದಾಗಿ ಹೇಳುವಾಗ, ಅಪೊಸ್ತಲರು ಈ ಕಾರ್ಯವನ್ನು ಆತನ ಶಕ್ತಿಯಿಂದ ಮಾಡಬೇಕಿತ್ತು.* "ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು" (14:13, 14). ಅವರು ಏಕಾಂಗಿಗಳಾಗಿ ಸೇವೆ ಮಾಡುವ ಅಗತ್ಯವಿರಲಿಲ್ಲ. ಪ್ರಾರ್ಥನೆಯ ಮೂಲಕ ಅವರು ದೇವರ ಶಕ್ತಿಯನ್ನು ಹೊಂದಿದ್ದರು. ಅವರು ಕೇಳುವಾಗ ಅದನ್ನು ಪಡೆಯಲು ಸಾಧ್ಯವಿತ್ತು, ಅದನ್ನು ಅವರು ಯೇಸುವಿನ ಹೆಸರಿನಲ್ಲಿ ಪಡೆಯಬೇಕಿತ್ತು. ಆಗ ಅವರ ಅಗತ್ಯತೆಗಳು ನೀಗುತ್ತಿದ್ದವು.

ಆತನ ವಾಗ್ದಾನಗಳಲ್ಲಿ ನಮಗೂ ಅನ್ವಹಿಸುತ್ತವೆ. ಅದೇನೆಂದರೆ ಆತನ ಶಿಷ್ಯರು ಸುವಾರ್ತೆಯನ್ನು ಸಾರುವಾಗ ಯೇಸು ಅವರ ಸಂಗಡ ಇದ್ದನು ಎಂಬದೇ (ಮತ್ತಾಯ 28:18-20), ಯೇಸು ತಂದೆಯ ಬಳಿಗೆ ಹೋದಾಗ, ಆತನಬಲ ವಿವೇಕ ಹಾಗೂ ಸಹಾಯವು

ಅವರ ಸಂಗಡ ಇದ್ದವು. ಈಗಿನ ಕಾಲದಲ್ಲಿ ನಾವುಗಳು ಆತನ ಸುವಾರ್ತೆಯನ್ನು ಸಾರುವಾಗಲೂ, ಆತನ ಪ್ರಸನ್ನತೆಯು ನಮ್ಮ ಸಂಗಡಲೂ ಇರುತ್ತದೆ.

## ಮುಕ್ತಾಯ

ಭವಿಷ್ಯತ್ತಿನಲ್ಲಿ ನಿರ್ವಹಿಸಬೇಕಾದ ಕೆಲಸದ ಕುರಿತು ಮೇಲುಪ್ಪರಿಗೆಯಿಂದ ಯಾವ ಉತ್ತೇಜನವನ್ನು ಯೇಸು ನಮಗೆ ನೀಡಿರುವನು! ಕರ್ತನು ಮಾಡಿದ ಕಾರ್ಯಗಳನ್ನೇ ಆತನ ಅನುಯಾಯಿಗಳು ಮಾಡುವರು, ಆತನಿಗಿಂತಲೂ ಮಹತ್ತಾದ ಕಾರ್ಯಗಳನ್ನು ಮಾಡುವರು, ಆತನ ಬದಲಾಗಿ ಅವರು ಕಾರ್ಯಮಾಡುವರು, ಆತನ ಬಲ ಹೊಂದಿದವರಾಗಿ ಮಾಡುವರು. ಆ ರಾತ್ರಿಯಲ್ಲಿ ಅಪೊಸ್ತಲರು ಹೊಂದಿದ ಆದಿಕಾರವು ಆತನ ಸೇವೆಯನ್ನು ಮಾಡುವ ಸಕಲ ಹಿಂಬಾಲಕರಿಗೆ, ಆತನು ಬರುವವರೆಗೆ ಉತ್ತೇಜನವಾಗಿರುತ್ತದೆ.

*"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ. ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು" (ಎಫೆಸ 2:8-10).*

*"ಹಾಗೆಯೇ ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು" (ಯಾಕೋಬ 2:17).*